876 11528

8966

ಕರ್ಣಾಟಕ ವಾಸವದತ್ತ

ಕೆ. ರಾಮಸ್ವಾಮಿ ಅಯ್ಯಂಗಾರ್

162

0,33,188
AYY K
N13
L1528

Digitized by ROJA MUTHIAH RESEARCH LIBRARY

8966

Digitized by ROJA MUTHIAH RESEARCH LIBRARY

8966

THE

# KARNATAKA CHANDRIKA

Series No. 37

# ಕರ್ಣಾಟಕ ವಾಸವದತ್ತಾ

ಮಾಗಡಿ ಎ. ವಿ. ಸ್ಕೂಲ್ ಹೆಡ್ಮಾಸ್ಟರ್
ಕೆ. ರಾಮಸ್ವಾಮಯ್ಯಂಗಾರ್ಯರಿಂದ
ಕನ್ನಡಿಸಲ್ಪಟ್ಟಿತು.

ಬೆಂಗಳೂರು

MYSORE:
THE G. T. A. PRINTING WORKS.
1913

Digitized by ROJA MUTHIAH RESEARCH LIBRARY

O,33,186 AYY V N

## ಉಪೋದ್ಘಾತಂ.

---

ಸುಬಂಧು ಮಹಾಕವಿಯ ವಾಸವದತ್ತೆ ಎಂಬ ಗ್ರಂಥವು ಇದುವರೆಗೂ ಕನ್ನಡಿಸಲ್ಪಡಲಿಲ್ಲವಾದುದರಿಂದ ಆ ಕಥಾಂಶವನ್ನೇ ಕನ್ನಡಿಗರು ತಿಳಿಯಲಿಕ್ಕೆ ಅವಕಾಶವಿರಲಿಲ್ಲ. ಆದುದರಿಂದ ಅದರಲ್ಲಿನ ವರ್ಣನಾಭಾಗಗಳನ್ನೆಲ್ಲ ಬಿಟ್ಟು, ಕಥಾಂಶವನ್ನು ಮಾತ್ರವೇ ಸಂಗ್ರಹಿಸಿ, ಸುಲಭವಾಗಿ ತಿಳಿಯುವಂತೆ ಕನ್ನಡ ಕಂದಪದ್ಯಗಳಿಂದ ಬರೆದು ಇದ್ದೇನೆ.

ಇದನ್ನು ಸಮಗ್ರವಾಗಿ ಪರಿಶೋಧಿಸಿ ಅನುಗ್ರಹಿಸಿದ ಶ್ರೀ॥ ಆರ್. ನರಸಿಂಹಾಚಾರ್, ಎಂ. ಏ. ಯವರಿಗೂ, ಕರ್ಣಾಟಕ ಚಂದ್ರಿಕೆಯಲ್ಲಿ ಪ್ರಕಟಿಸಲು ಅವಕಾಶ ಕೊಟ್ಟ ಮ॥ ರಾ॥ ಆಸ್ಥಾನ ಪಂಡಿತರು, ಯ॥. ಶ್ರೀಕಂಠಶಾಸ್ತ್ರಿಗಳವರಿಗೂ ತುಂಬ ಕೃತಜ್ಞನಾಗಿದ್ದೇನೆ.

ವಾಚಕರು ಇದರಲ್ಲಿ ಕಾಣಬರುವ ದೋಷಗಳನ್ನು ದಯಮಾಡಿ ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ.

ಕೆ. ರಾಮಸ್ವಾಮಯ್ಯಂಗಾರ್.

11528
28/10

॥ ಶ್ರೀಃ ॥

# ಕರ್ಣಾಟಕ ವಾಸವದತ್ತೆ.

ಆವಳದಯೆಯಿಂ ಕವಿಗಳ್ । ಭಾವಿಸಿತಿಳಿದಪ್ಪರಖಿಳಭುವನ ಸ್ಥಿಳ
ಮಂ ॥ ತೀವಿದ ಕೈಪಿಡಿಯವೊಲಾ ॥ ದೇವಿ, ಸರಸ್ವತಿಯೆ ಮಾಳ್ಕಸನ್ಮಂ
ಗಳಮಂ ॥೧॥

ರಂಗಂ ಗತಿಜಿತಮದ ಮಾ । ತಂಗಂ ಕಲ್ಮಷವಿಭಂಗನಾಶ್ರಿತಸಂಗಂ ॥
ಇಂಗಡಲಣುಗಿಯಕೂಡಿ, ಸು । ಮಂಗಳಮಂ ಮಾಳ್ಕೆ ಪೂರ್ಣಕರುಣಾ
ಪಾಂಗಂ ॥೨॥

ಕುಜನನೆ ಹೀನಂಜಗದೊಳ್ । ಭುಜಗನಿನೇಂದುಸಿರ್ವರರಿದರದುಃಪುಸಿ
ನುಡಿಯಾ ॥ ಭುಜಗಂ ನಕುಲದ್ವಿಷನೀ । ಕುಜನಂ ಸಕುಲದ್ವಿಷಂಪರೀಕ್ಷಿಸಿ
ನೋಡಲ್ ॥೩॥

ಅದರಿಂ ಮುನ್ನಮೆಕುಜನರ । ಪದಪಂಕಜಕೆರಗಿ ಕಂದದಿಂಕನ್ನಡಿ
ಸಿಂ ॥ ಪದಪಿಂ ವಾಸವದತ್ತೆಯ । ಸದಮಳಚರಿತವ, ಸುಬಂಧುರಚಿತವ
ನೊಲ್ದಂ ॥೪॥

ಚಿಂತಾಮಣಿಪೆಸರಿಂದಂ । ಶಾಂತಗುಣಂ ಕಾಂತಿವಂತನುತ್ತಮನ
ವನೀ ॥ ಕಾಂತೆಯನಾಳುತಲಿರ್ದಂ । ಚಿಂತಾಮಣಿಯಾಶ್ರಿತರ್ಗವನೆ ಎನೆ
ಲೋಕಂ ॥೫॥

ಅವನಾಳ್ತನದೊಳ್ಪರಿವಾ । ದವೆ ವೀಣೆಯೊಳಂಬುಜದೊಳೆರಾಜವಿ
ರೋಧಂ ॥ ನವಮಣಿಯೊಳ್ಸೂಚಿವಿಭೇ । ದವುಕಾಣುಗುಮಲ್ಲದಿಲ್ಲಮೆಲ್ಲಿ
ಯುಮರಸಲ್ ॥೬॥

ರಾಮನಭಕ್ತಿಯತೋರ್ದು ವಿ । ರಾಮವರಾಜ್ಯದೊಳೆತೋರ್ದಭರ
ತಂ, ನಳನುಂ ॥ ಭೈಮಿಯುವೆರೆದುಪ್ರನಭೂರ್ । ಕಾಮಂತಾನಾದಸಿವರಪ್ರೋ
ಳಿಸಲಹುದೆ? ॥೭॥

Digitized by ROJA MUTHIAH RESEARCH LIBRARY

ಶಂಕರನಾದೊಡಮವಿಷಾ | ದಂ, ಕುವಲಯ ಮಿತ್ರನಾದೊಡಂ
ಕ್ಷಯರಹಿತಂ ‖ ಬಿಂಕದಕಲಿಯೆನುತಂ ನಿ | ಶ್ಯಂಕೆಯೊಳಾನೃಪನಪೊಗಳು
ತಿರ್ದುದುಲೋಕಂ ‖೮‖

ಆನರಪತಿ ತನುಜಾತಂ | ಭೂನುತಕಂದರ್ಪಕೇತುವೆನೆ ಪೆಸರಾಂ
ತಂ ‖ ಮಾನಿನಿಯರವನಕಂಡು ವಿ | ಮಾನೆಯರಾಗುತ್ತಲಿರ್ಪರೇಂ ಸುಂದ
ರನೊ ? ‖೯‖

ಜನಿತಾನಿರುದ್ಧಲೀಲನ | ಮನಸಿಜನಾ ರತಿಮನೋಹರನ ದರುಶನ
ದಿಂ ‖ ವನಿತಾಜನಹೃದಯಂ ನಲಿ | ದನುದಿನಮುಲ್ಲಾಸದಿಂದೆನಿರುಕಿಸು
ತಿರ್ಕುಂ ‖೧೦‖

ಅರಿನೃಪವನಿತೆಯರೀತನ | ವರಸಾಹಸದಗ್ನಿಯಿಂದ ಮುರಿಯಲ್ಕಿನಿ
ಯರ್ ‖ ಕರತಲದಿಂ ಬಡಿದಪರೆಂ | ದುರುಮುಕ್ತಾಹಾರಮುದಿರುತಿರ್ದಪು
ವೆರ್ದೆಯಿಂ ‖೧೧‖

ಒಂದುದಿನದಿರುಳಕಡೆಯೊಳ | ಗಂದಂಗೆಟ್ಟಪರಜಲಧಿಗಿಳಿಯುತ್ತಿರ
ಲಾ ‖ ಚಂದ್ರಂ ನಿಶೀಥಿನೀ ಕಾ| ಳಂದಿಯನೊರೆತೊಂಬೆಯಂತೆ ತೋರ್ದುದು
ನೋಡಲ್ ‖೧೨‖

ಸಾರಿಕೆಗಳ್ಬೋಧಿಸುತಬಿ | ಸಾರಿಕೆಯರ ನೆಳ್ಚರಂಗೊಳಿಸುತಿರೆ ಹಿ
ಮದಿಂ ‖ ದಾರಡಿನೆಯ್ದಿಲ್ಬಂಡಿನೊ | ಳೋರಂತಿರೆಸಿಲ್ಕಿಪಾರದಿರ್ದುದು
ಭರದಿಂ ‖೧೩‖

ಜನಪತಿಸುತನಾಸಮಯದೆ | ಘನನಿದ್ರಾಂಗನೆಯಸೊಗದೊಳಿರೆ
ತಾಂ ಕಂಡಂ ‖ ಕನಸಿನೊಳುತ್ತಮಜಾತಿಯ | ವನಿತೆಯನಷ್ಟಾದಶಾಬ್ದದಾ
ಸುಂದರಿಯಂ ‖೧೪‖

ಅಡಿಗಳ್ಕಮಠಂಗಳ್ಕ | ನ್ನಡಿಗಳ್ಸ ಕಪೋಲಗಳ್ಮೃಗೇಂದ್ರನ ತೆರ
ದಿಂ ‖ ನಡು, ಬಾಳೆಗಂಬದಂದದ | ತೊಡೆಗಳ್, ಪೊಂಗೊಡವಪೋಲ್ವವ
ಕೆಸ್ತೀಜಂಗಳ್ ‖೧೫‖

ತಿಂಗಳನಗುವುದು ಮೊಗಮಾ | ಪೊಂಗಳಸಂಗಳನುರೋಜಯುಗ
ಳಂಗೆಲ್ಗುಂ ‖ ಕಂಗಳ್ಮೀಂಗಳನೇಳಿಪು | ವಂಗನೆಯಾಕಬರಿ ಮೋರಗಳನಿಳಿ
ಕೆಯ್ಗುಂ ‖೧೬‖

Digitized by ROJA MUTHIAH RESEARCH LIBRARY

8966



ರೋಮಲತೆ ಕಾತಪಣ್ಗಳೊ, | ಕಾಮನ ಮದಕರದಚರ್ಮಕಳ
ಸಂಗಳೊ, ಮೇಣ್ ‖ ಸಾಮಜಕುಂಭಂಗಳೊ, ಇವು | ಭಾಮೆಯುವಕ್ಷೋ
ಜಯುಗಳಮೋ, ಎನೆತೋರ್ಕುಂ ‖೧೭‖

ಬಳಿಕೆಳ್ಚತ್ತಾ ತರುಣಂ | ಬಲುನಿದ್ರೆಯನುಳಿದುಕುಳಿತುಪಾಸೊ
ಳ್ಚಂತಾ ‖ ಜಲಧಿಯೊಳಳ್ದನ ತೆರದಿಂ | ದುಳಿದರಿವಂ ತನುವನುಳಿಸಲಾ
ರದೆಸುಯ್ದಂ ‖೧೮‖

ಬಾಲೆಯೆ ! ಬಾ, ಬಾರೆನುತಂ | ತೋಳಂನೀಡುತ್ತೆನಭದೊಳಾಲಿಂಗಿ
ಪೆನೆಂ ‖ ದಾಲಿಪೆನಿಸಿನುಡಿಗಳನೆನು | ತಾಲಿಗಳಂ ತಿರುಗಿಸುತ್ತೆನೋಳ್ಪಂ
ಬಯಲೊಳ್ ‖೧೯‖

ಪರಿಜನರಂಪುಗಿಸದೆಸುಖ | ಕರತಾಂಬೂಲಾದಿಭೋಗ್ಯವಸ್ತುವನು
ಳಿದಾ ‖ ದರಿಸದೆ ಸಖರಂ ಬಾಗಿಲ | ತೆರೆಯದೆ ನೂಂಕುತ್ತಲಿರ್ದನಾ ಪಗ
ಲನಿತಂ ‖೨೦‖

ಅಂತೆಯೆಕಷ್ಟದೆ ರಜನೀ | ಕಾಂತೆಯುಮಂ ನೂಂಕಿಸತಿಯಬೆರೆವೆ
ನೆನುತ್ತಂ ‖ ಕಾತುಸನುರೂಪನಿರೆಬಂ | ದಂ ತತ್ರಿಯಮಿತ್ರನೆನಿಪನಾ ಮಕ
ರಂದಂ ‖೨೧‖

ಕಂದರ್ಪಶರಾಹತಿಯಿಂ | ನೊಂದಳಲುತೆ ಮುಚ್ಚೆವೋದ ಮಿತ್ರನ
ಕಂಡಾ ‖ ನಂದಮುಳಿದೆಳ್ಚರಿಸುತಿಂ | ತೆಂದಂ ಮಕರಂದನವನೊಳಿನಿನುಡಿ
ಯಿಂದಂ ‖೨೨‖

ಅಳಿಜನದಾಚಾರವ ನೀಂ | ಬಳಿವಿಡಿದೇತರ್ಕೆ ಚಿಂತೆಗೊಂಡಿರ್ಪ
ಯ್ನ ‖ ನ್ನಳಲಿಂ ವಿತರ್ಕಡೋಳಾ | ಕುಳರಪ್ಪರ್ಜನರೀಗಳೆಲೆ ನೃಪ
ತನುಜಾ ‖೨೩‖

ಅಳಲಿದು ಪಾದದಧೂಳಿಯ | ವೊಲೆತೊಳೆದುಂ ತಲೆಯಕಲುಷಿಪುದು
ಮೇಣ್ತಾಳಾ ‖ ಫಲರಸದಂದದೆ ತಾ ಮೊದ | ಲೊಳಗಿನಿದಾಗಿರ್ದು ಕಡೆಗೆ
ತೋರ್ಪುದು ಕಟುವಂ ‖೨೪‖

ಅನುಭವಿಸೆ ಕೊನೆಗೆ ಮೋಹವ | ಜನಿಪುದು ವಿಷಬೀಜಪುಷ್ಪದಂ
ದದೆ ಮತ್ತಾ ‖ ತನುವಚನಂಗಳ ಮಾಂದ್ಯವ | ನೆನಸುಂ ತೋರ್ದಪುದು
ಜೀರ್ಣರೋಗದ ತೆರದಿಂ ‖೨೫‖

ಪುಟ್ಟುವುದು ಬೀಜಮಿಲ್ಲದೆ । ನೆಟ್ಟನೆ ಬೆಳೆದಪುದು ಕಾಂಡಮಿಲ್ಲದೆ ಶಠಳರೊಳ್ ॥ ಕಟ್ಟುಗ್ರದ ದೋಷಂಬಳೆ । ದಟ್ಟವುದು ಗುಣಂಗಳೆಲ್ಲಮಂ ದುಃಖಾಗಂ ॥೧೬॥

ಆಲಿಸಿ ಮಕರಂದನ ವಾ । ಗ್ಜಾಲವ ನಾನೃಪತನೂಜನೆಂದಂನಯದಿಂ ॥ ಕೇಳ್ಕೈ ನಿನ್ನುಪದೇಶಕೆ । ವೇಳೆಯಿದಲ್ತೆನ್ನತನುವಸುಡುವುದು ಶೋಕಂ ॥೧೭॥

ಎಳವೆಯಿನಾಂ ಸುಖದುಃಖಂ । ಗಳೊಳಗಲದೆ ಕೂಡಿ ನಡೆದೆವೀಗಳ್ನೀಂ ಬಂ ॥ ದಲಸದೆ ಹಿತಮೆಸಗೆಂಬಾ । ಕೆಳೆಯನ ನುಡಿಗೇಳ್ದು ಸಮ್ಮತಿಸೆ ಮಕರಂದಂ ॥೧೮॥

ಬಡನೆಪರಿಜನಕೆಕಾಣದೆ । ನಡೆದತಿಭರದಿಂದಮಿರ್ವರುಂ ತನ್ನಿಶೆಯೊಳ್ ॥ ಗಿಡುಮರಗಳಿನೆಸೆವಾಕಾ । ರಡವಿಯುವಿಂಧ್ಯಾದ್ರಿ ಯೆಡೆಗೆ ತಾವೇಳ್ತಂದರ್ ॥೧೯॥

ಮದಗಜದ ಬಿಂಕಮಂ ಕಂ । ಡೊದರುತೆ ದಾಡೆಯನೆ ಕರ್ಚಿ ಜಡೆಗೊಡಹುತ್ತಂ॥ ಬೆದರಿಸಿ, ಸಿಗಿದಾ ಕುಂಭವ।ನುದಿರ್ಚಿಸುಮುಕ್ತಾಳಿಯಂನಲಿದುದು ಮೃಗೇಂದ್ರಂ?(ನುದಿರ್ಚಿ ಮೌಕ್ತಿಕಮ ನೆಸೆದುದೊಂದು ಮೃಗೇದ್ರಂ)

ಅಲ್ಲಿಂದೆ ಮುಂದೆ ನಡೆದು ಸ । ಮುಲ್ಲಾಸದೆ ಕಂಡರೊಂದು ನೇರಿಲಮರನಂ ॥ ನಿಲ್ಲದೆ ಬಳಲ್ದಿದರಡಿಯೊಳ್ । ಮೆಲ್ಲನೆ ವಿಶ್ರಮಿಪೆವೆಂದು ಚಿಂತಿಸಿಕುಳಿತರ್ ॥೨೦॥

ಅನಿತರೊಳರ್ಕಂ ಪಡುವೆ । ಣ್ಣಿನಸಂಗವ ಬಯಸಿ ಚರಮಶಿಖರವನಡರಲ್ ॥ ಮುನಿದಳೊ ! ಪದ್ಮಿನಿಸವತಿಯೊ । ಳೆನೆಕಣ್ಮುಚ್ಚಿದುದು ಭೃಂಗದೊಡನರವಿಂದಂ ॥೨೧॥

ಕೆಳೆಯಂ ಪಸಿದನೆನುತ್ತಂ । ಫಲಮೂಲಂಗಳನೆ ತಂದು ಕೊಟ್ಟವನುಂಡಾ ॥ ಬಳಕಂ ಮಕರಂದಂ ಮಿ । ಕ್ಕುಳಿದುದನುಂಡವನ ಸಂತವಿಡುತಿರಲಾಗಳ್ ॥೨೨॥

ಕಂದರ್ಪಕೇತುವಾಮುಕ । ರಂದಂ ವಿರಚಿಸಿದ ತಳಿರವಾಸೊಳ್ಸೊಗದಿಂ॥ ಸುಂದರಿ ನೆಲಸಿರಲಿರ್ದೆಯೊಳ್ । ಗಿಂದ್ರಿಯತತಿ ಚಲಿಸದಿರೆ ಮಲಂಗಿದನಾಗಳ್ ॥೨೩॥



ಸಂದಿರೆಜಾವಂ ನಿಶೆಯೊಳ । ಗಂದಾತರುಶಿಖರದಲ್ಲಿ ಕಲಕಲರವದಿಂ ॥ ಸಂಧಿಸಿಕಲಹಿಪಮಳ್ಗಿಳಿ । ಯಂದವ ಕಂದರ್ಪಕೇತು ವಾಲಿಸಿನುಡಿದಂ ॥೨೪॥

ಮಕರಂದನೆ ! ಮರದಗ್ರದೆ । ಶುಕಶಾರಿಕೆಗಳ್ಮನೋಜ್ಞದಾಲಾಪಳಂ ॥ ಪ್ರಕಟಸುತಿರ್ದಪುವೆನೆಕೌ । ತುಕದಿಂದಂ, ಕೇಳುತಿರ್ದನೆಳ್ಚರಿನವನುಂ ॥೨೫॥

ಸಾರಿಕೆ ನುಡಿದುದು ವೇಳೆಯು । ಮೀರುತೆ ಬಂದಿರ್ಪ ವಲ್ಲಭನೊಳುರುಮುಳಿಸಿಂ ॥ ಕೀರನೆ ! ಇರುಳೇಂತಳುವಿದೆ । ಬೇರೆತ್ತಣಸಾರಿಕೆಯೊಳೆ ಬೆರೆದೆಯೊ ? ಧೂರ್ತಾ ॥೨೬॥

ಎನೆಕೀರಂ ನುಡಿದುದು ಕೇಳ್ । ಮುನಿಸಂನೀನುಳಿದುಭದ್ರೆ ! ಪಿರಿದಹಕಥೆಲೋ ॥ ಜನಗೋಚರವಾಗಲ್ತಾ । ನನಿತಂ ನೋಡುತ್ತೆ ತಳುವಿದೆಂ ಪೆರತಿಲ್ಲಂ ॥೨೭॥

ಸಾರಿಕೆಯುತಿಕುತುಕದಿ ನೆಲೆ। ನೀರನೆ ! ತತ್ಕಥೆಯನುಸಿರ್ವುದೀಗಳೆ ಎನ್ನೊಳ್ ॥ ತೀರುವವೋಲ್ಸಂದೆಗಮೆನ । ಲಾರಂಭಿಸಿದತ್ತು ಕಥೆಯನಾರಾಜಶುಕಂ ॥೨೮॥

ಕುಸುಮಪುರಮೆಂಬ ನಗರಮು । ದೆಸೆವಸುಧಾಧವಳ ಹರ್ಮ್ಯತತಿಯಿಂದೇವಾ ॥ ವಸಥಂಗಳಿಂದೆ ಬನಗಳ । ವಿಸರದಿ ನೊಪ್ಪುವುದು ಬಡಗಣತ್ತಲ್ಕಾಂತೇ ! ॥೩೦॥

ಮಹಿಷಾಸುರ ಮದಮರ್ದಿನಿ । ಗುಹಜನನಿ, ಸುರಾಸುರೇಂದ್ರವಂದಿತ ಶೋಭಾ ॥ ವಹಚರಣೆ, ಚಂಡಿವೆಸರಿಂ । ದೆಹಿಮಾಚಲತನಯೆ ಯಲ್ಲಿತಾಂ ನೆಲಸಿರ್ಪಳ್ ॥೩೧॥

ಅದರಸನಿಹದೊಳೆಭಾಗೀ । ರಥಿಪರಿವುದು ಮಿಂದರಿಂಟದರ ನೋಡಿದರಂ॥ ಬೆದರದಿರಿಂಯುಮಭಯಕೆಂ। ದೊದರುವವೋಲ್ವೇಗವಾಗಿ ಘೋರ್ಗರೆಯುತ್ತಂ ॥೩೨॥

ಸುರರಿಳದು ಮಾಯುಲವರ್ಗಳ । ಶಿರದೊಳ್ಮುಡಿದಿರ್ದ ಕುಸುಮರಜದಿಂ ಬೆರೆದಾ ॥ ಪರಿಮಳದಿಂ ಮಗಮಗಿಸುತೆ। ಪರಿವುದು ಪಾವನವ ಗೆಯ್ವುತಂ ನಾಡುಗಳಂ ॥೩೩॥

Digitized by ROJA MUTHIAH RESEARCH LIBRARY

ಆಪುರವ ನಾಳುತಿರ್ಪಂ | ಭೂಪತಿ, ಶೃಂಗಾರಶೇಖರಂ ಧರ್ಮ ದಿನಾ || ರೂಪಿಂ ಮದನಂಗೆಣೆ, ವರ | ಚಾಪದಿನಾ ಪಾರ್ಥನುಪಮೆಯೆನೆ ಭುವನಜನಂ ||೪೪||

ವಲಭಿತ್ಪಾವಕ ಧರ್ಮಂ | ಸಲೆನಿರುರುತಿಯಾಪ್ರಚೇತನಂಗಂಧ ವಹಂ || ಬಲಯುತಧನದಂ ಶಂಕರ | ನಿಳೆಯೊಳ್ತಾನಷ್ಟಮೂರ್ತಿಯೆನೆ ಪೆಸರ್ವಡೆದಂ ||೪೫||

ವಸುಮತಿಯ ನಾಳಲಾತಂ | ಶಶಿಯೊಳ್ಕನ್ಯಾತುಲಾಧಿರೋಹಂ ಮೇ ಣಾ || ಪ್ರಸವದೆ ಶೂಲಾಘಾತಂ | ನಿಶಿಯೊಳ್ಮಲಿನಾಂಬರತ್ವಮಲ್ಲದೆ ಯಿಲ್ಲಂ ||೪೬||

ಅಂತಃಪುರದಧಿದೇವತೆ | ಕಾಂತೆಯನಂಗವತಿಯೆಂಬಳುತ್ತಮಕೀ ರ್ತ್ಯಾ || ಕ್ರಾಂತಜಗತ್ತ್ರಯೆಮೆರೆವಳ್ | ಸಂತೋಷವನೀವುತವನ ಮಹಿಷಿ ಯೆನಿಸುತಂ ||೪೭||

ಅವರೊಳ್ಸಂಜನಿಸಿದ ವಾ | ಸವದತ್ತಾನಾಮ ಕನ್ಯೆಯುತ್ತಮರೂ ಪಿಂ || ಭುವನತ್ರಯಮಂಮೋಹಿಪ | ಸುವಿಶೇಷ ವಿಲಾಸದಿಂದೆ ಶೋಭಿ ಸುತಿರ್ಪಳ್ ||೪೮||

ಎಳವೆರೆಯಂದದೆ ಬಳೆವಾ | ಕಳೆಯಿಂ ತೊಳಗುತ್ತೆಬಾಲ್ಯಮಂ ಮಿಾ ರ್ದಾಕಳಾ || ವಿಳಸಿತೆಯಾಗುತೆ ಹರೆಯವ | ತಳೆದತಿಸೌಂದರ್ಯವಂತೆಯೆಂ ದೆನೆ ನೆಗಳ್ದಳ್ ||೪೯||

ವಾಸವದತ್ತೆಯಚೆಲ್ವಿವಿ | ಲಾಸವತಾಂ ನೋಳ್ಪೆನೆಂದುಚೈತ್ರಂಬರ ಲಾ || ಭೂಸುದತಿ ಪುಷ್ಪಿಸಿದವೋಲ್ | ಭಾಸುರಮಾದತ್ತುಪೂಗಳಿಂದು ದ್ಯಾನಂ ||೫೦||

ಮಧುಕರಝೇಂಕೃತಿಯಿಂದಂ| ಪಥಿಕಜ್ವರಮಂನೆಗಳ್ಚಿಮಳಯಾನಿಳ ನಿಂ || ಮದವೇರಿಸಿ ವಿರಹಿಗಳಂ | ಮಧುಮಾಸಂಬಂದುದಂದುಸೊಗವಿಾ ವೃತ್ತಂ ||೫೧||

ಅತಿದೂರಂ ಬಳೆದಿರ್ಪೀ | ಮಧುವಿಂವಿಕ್ರೀತನಾಗನಾವಂ ಜಗದೊ ಳ್ || ಅತಿಮುಕ್ತಮುನಿಯುಮರಲ್ದಂ | ರತಿಪತಿಜಯಶಂಖದಂತೆ ಮೊರೆ ದುವು ಭೃಂಗಂ ||೫೨||

Digitized by MUTHIAH RESEARCH LIBRARY



ಅರಲ್ದಾಮಲ್ಲಿಗೆನುಡಿವೆಡೆ | ಮೊರೆವಾಮಧುಕರನ ನಿನದಮಾ ಮೂಜಗಮಂ || ನೆರೆಗೆಲ್ದಂಗಜಶಂಖದ | ವರನಿನದದತೆರದೆ ತೋರ್ದ ತ್ತಾಗಳ್ ||೫೩||

ದಾರಿಗರೆರ್ದೆಮಿಾಂಗಳನಾ | ಮಾರಂಪಿಡಿಯಲ್ಕೆ ಬಡಿಶಮಂ ಬೀಸಿದ ವೋಲ್ || ತೋರಿದುದಾಬೇಸಗೆಯೊಳ್ | ಚಾರುತರಂ ಪಾಟಲೀಸುಮಂ ರಾಜಿಸುತಂ ||೫೪||

ಮಗಳಂಗವಿಭ್ರಮವ ಕಂ | ಡೊಗೆವಾನಂದದೆ ಸ್ವಯಂವರವನಾಗಿ ಸೆ ತಾಂ || ಬಗೆದಂದರಸಂತುರಿಹದೆ | ಜಗದರಗುವರರ್ಕಳೆಲ್ಲರಂ ಕರೆ ಯಿಸಿದಂ ||೫೫||

ಅಗರುಪರಿಮಳದಪೊಗೆಯಿಂ | ಮಗಮಗಿಸುತೆ ಕುಸುಮಮಾಲೆ ಯಿಂಮೆರೆಯುತ್ತಂ || ಸೊಗಸಿದ ಶಿಬಿಕೆಯನೇರಿಯೆ | ಬಗೆಯಂಬೀರುತ್ತೆ ನಡೆದಳವಳಾ ಸಭೆಯೊಳ್ ||೫೬||

ಕೆಲಬರ್ಕುನಂಗಳ ಮೇಣ್ | ಪಲಬಪ್ರಶ್ನೆಗಳನರೆಬರಾಜಾತ ಕದಾ || ಫಲಮಂತಿಳಿಯುತೆ ಕನ್ಯೆಯ | ನೊಲಿಪೆವುತಾವೆಂದು ತವಕದಿಂ ಬರುತಿರ್ದರ್ ||೫೭||

ಅರಮಗಳಾಚಣದೊಳ್ತಾ | ನರಸರನೋರೋರ್ವರಾಗಿನೋಡುತೆ ನಿಲದಾ || ವಿರತಿಯುಮನದಿಂದೊಪ್ಪದೆ | ಬರುತಿರ್ದಳ್ನರಪರೆಲ್ಲರಂನಾಣ್ಚಿ ಸುತಂ ||೫೮||

ಅಂದಿನಿರುಳಲ್ಲಿ ಕಂಡಳ್ | ಸುಂದರನಂ ಸ್ವಪ್ನದಲ್ಲಿಹರೆಯದವರಿ ಜಂ || ಕಂದರ್ಪಕೇತುವೆಂಬನ | ಕಂದರ್ಪನ ಬಾಣಹತಿಯಿನೊರಗಿದ ಳಾಗಳ್ ||೫೯||

ವಿರಹವ್ಯಥೆಯಿಂ ಸುಂದರಿ | ಕೊರಗುತೆಮೆಯ್ಮರೆದು ಕಷ್ಟದಿಂ ಕೆಳ ದಿಯರಾ || ಪರಿಚರ್ಯೆಯಿನೇಳ್ದೊಡನೆಯೆ | ಬರಗಿದಳುಪಚರಿಸುತಿರ್ದರಾ ಸಖಿಯರ್ಕಳ್ ||೬೦||

ಪ್ರಿಯಸಖಿಯರ್ಯೋಚಿಸುತನು | ನಯದಿಂಕಂದರ್ಪಕೇತುವಿನವು ನವರಿಯಲ್ || ರಯದಿಂದೊಡನಟ್ಟಿದರಾ | ಕೆಯಶಾರಿಕೆಯಂತಮಾಲಿಕೆಯ ನಾದರದಿಂ ||೬೧||

ಆ ಗಿಳಿಯೆನ್ನೊಡನೈತಂ | ದೀಗಿಡುವಡಿಯಲ್ಲಿ ನಿಂದಿಹುದೆನುತ್ತುಸಿ
ರು ‖ ತ್ತಾಗಿಳಿವಮೌನಂಗೊಂಡುದು | ರಾಗದಿ ನಾಲಿಸುತಲಿರ್ದನರಸುಕು
ಮಾರಂ ‖೬೨‖

ಸಡಗರದಿಂ ಕಂದರ್ಪಂ | ಮಡದಿಯ ಸಂದೇಶಹಾರಿಣಿಯ ಕಾಣು
ತ್ತಂ ‖ ಕಡುಭರದಿಂ ಬೆಸಗೊಳ್ಳ | ಲ್ತಡೆಯದೆ ಮಣಿದಿತ್ತುದವಳ ಪತ್ರಮ
ನಾಗಳ್ ‖೬೩‖

ಆದರದಿಂ ಕೈಕೊಂಡುರು | ಮೋದದಿಬಿಚ್ಚುತ್ತೆ ರಾಜತನುಜಂ
ಭರದಿಂ ‖ ದೋದಿದನಾಲಿಖಿತಾರ್ಥವ | ಸಾದರದಿಂ ಮಕರಕೇತು ಕೇಳ್ವಂ
ದದೆತಾಂ ‖೬೪‖

ಭಾವವನಿದಿರೊಳ್ಕಂಡುಂ | ತೀವಿದಸಂಶಯದೆ ಚಂಚಲಂ ಗೊಂಡಿ
ರ್ಪಳ್ ‖ ತಾವನುಭವಿಸಿದ ಕನಸಿನ | ಭಾವವನಿಜವೆಂದು ನಂಬದಿರ್ದಪ
ಳಿನ್ನುಂ ‖೬೫‖

ಎಂದೋದಿಕೊಂಡು ಸರ್ವಾ | ನಂದಂಗಳ ಶಿಖರವಡರ್ದ ತೆರದಿಂದಾ
ಗಳ್ ‖ ಕಂದರ್ಪಕೇತುವೆಳ್ದು | ಚಂದದ ಸಾರಿಕೆಯ ನಪ್ಪಿಕೊಂಡಂ
ಮುದದಿಂ ‖೬೬‖

ಏನಾಡುವಳೇಗೆಯ್ದಪ | ಳೇನುಸಿರಿದಳೆನ್ನ ಕಾಂತೆ ಯೊರೆಯೊರೆ
ಯೆನುತಂ ‖ ಭೂನಾಥಂ ಸಾರಿಕೆಯಿಂ | ಮಾನಿನಿಯಿರವಾಲಿಸುತ್ತೆ ಕಳೆದಂ
ಪಗಲಂ ‖೬೭‖

ಅನಿತರೊಳೀಸುದ್ದಿಗಳಂ | ಜನಕರಿಪುವೆನೆನುತಲಿಳಿದನೋ ! ಭೂತ
ಳಕಾ ‖ ದಿನಮಣಿಯೆಂಬಂದದೆ ಸೂ ‖ ರ್ಯನಬಿಂಬಂ ಪಶ್ಚಿಮಾಬ್ಧಿಗಿಳಿದ
ತ್ತಾಗಳ್ ‖೬೮‖

ವರುಣಾಶಾವಧು ಕಿವಿಯೊಳ್ | ಧರಿಸಿದ ಮಣಿಕುಂಡಲಾಂಶುವೋ !
ಕಾಲಭಟಂ ‖ ಕರವಾಳದಿ ನರಿದಾವಾ | ಸರಮಹಿಷನ ಕರ್ಣಮೂಲವೋ!
ದಿನಮಣಿಯೋ ! ‖೬೯‖

ಸೂರಿಯವೋಲ್ಸಂಜ್ಞೆಯುತ ‖ ನಾರಕ್ತಾಂಶುಕಧರಂಮಹಾಶಾಕ್ಯನ
ವೋಲ್ ‖ ಸೂರಂಪಡುವಣ ಜಲಧಿಯ | ನೀರೊಳ್ಮುಳುಗಿರಲು ಮುಚ್ಚಿ
ದುದು ಸಂತಮಸಂ ‖೭೦‖

8966



ಇದುನೆಲನಿದು ಜಲವಿದು ನದಿ | ಇದುಗಿಡುವಿದು ಕಾಡುಬೀಡುನಾ
ಡೆಂದೆಂಬಾ ‖ ಪದವಿಗೆಡೆಗುಡದೆ ಕಣ್ಮು | ಚ್ಚಿದುದೆಲ್ಲರ ನೆತ್ತಲುಂ ಬಹುಳ
ಸಂತಮಸಂ ‖೭೧‖

ಮಕರಧ್ವಜಂಗೆ ರತಿತ | ನ್ನಕರಂಗಳಿನೆರಚಿದರಳಮಾಲೆಯತೆರ
ದಿಂ ‖ ಪ್ರಕಟಿಸಿಬೆಳಗಿದುವಾತಾ | ರಕೆಗಳ್ಬಾನ್ ಬೆಳ್ಳಿಯಂತೆ ಕರಮೆಸೆ
ವಾಗಳ್ ‖೭೨‖

ಚಣದೊಳೆ ಮದನನ ಮಣಿದ | ರ್ಪಣವೋ ರಜನೀಸಿತಂಬಿನಿಯ ಕಂ
ಚುಕವೋ? ‖ ಎನೆಪೂರ್ವದೆ ಮೂಡಿದ ಚಂ | ದ್ರನಬಿಂಬಂ ಕಾಣಿಸಿದುದು
ತೀವಿದರುಚಿಯಿಂ ‖೭೩‖

ಸುಂದರನಾಗಳ್ಸಖಿಮಕ | ರಂದರನೊಡಗೊಂಡು ಕುಸುಮಪುರಕೇ
ಳ್ತಂದಾ ‖ ಚಂದಿರವದನೆಯ ತೊಳಗುವ | ಮಂದಿರಮಂಕಂಡು ಹರ್ಷಪುಳ
ಕಿತನಾದಂ ‖೭೪‖

ಪ್ರಮದಾಪ್ರಣಯಾಲಾಪಂ | ಕ್ರಮದಿಂ ಕಿವಿಗಿಸಿದನೀಯಲಾನೃಪ
ತನುಜಂ ‖ ಕಮನೀಯಾಂತಃಪುರವಿ | ಭ್ರಮಮಂ ಕಂಡಂದು ಮಿತ್ರನೊಡ
ನೊಳವೊಕ್ಕಂ ‖೭೫‖

ಕಂದಿದಮೊಗದಿಂ ಜಗುಳ್ವಾ | ಮಂದಾಶ್ರುಗಳಿಳಿದುತೋಯಿಸಲ್ಕವ
ಯವಮಂ ‖ ಕಂದರ್ಪಶರಾಹತಿಯಿಂ | ನೊಂದೊರಗಿದ ಸತಿಯ ಕಂಡವಂ
ಮೆಯ್ಮರೆದಂ ‖೭೬‖

ಶಿಶಿರೋಪಚಾರದಿಂದವ | ರಸುವಿಡಿದೆಳ್ಚತ್ತು ಕುಳಿತರೊಂದಾಸನ
ದೊಳ್ ‖ ರಸೆಗಿಳಿದರತಿಮನೋಜರೊ ? | ಬಿಸವಂದಮಿದೆನುತೆ ಚಿಂತಿಸ
ಲ್ಕಾಳಿಜನಂ ‖೭೭‖

ಅವರೊಳ್ಮಯ್ಯೆ ಕಲಾವತಿ | ಸವಿನಯದಿಂ ನುಡಿದಳಾರ್ಯಪುತ್ರನೆ
ಕೇಳ್ಳೆ ‖ ಅವಸರಮಿಲ್ಲಂ ವಿಸ್ತಂ | ಭವನುಸಿರಲ್ಸೂಕ್ಷ್ಮವಾಗಿ ಪೇಳ್ದಪೆ
ನೀಗಳ್ ‖೭೮‖

ಉರಗಾಧಿಪನುಸಿರಲ್ವಿಧಿ | ಬರೆಯಲ್ಬಾಂದಳಮೆನಿಪ್ಪ ಪತ್ರದೊ
ಳಾಸಾ ‖ ಗರಜಲಮಷಿಯಿಂದೊಡತಿಯ | ವಿರಹವ್ಯಥೆ ಬಣ್ಣಿಸಲ್ಕೆ ಸಾಲ
ದುಕಲ್ಪಂ ‖೭೯‖



Digitized by ROJA MUTHIAH RESEARCH LIBRARY

ನಿನ್ನಯ ರಾಜ್ಯವನುಳಿದೀ | ಕನ್ನೆಯನರಸುತ್ತೆ ಬಂದೆ ಯೊಡೆಯನ ಮಗಳುಂ ‖ ಸಿನ್ನೊಳ್ಮನಮಿಟ್ಟಳಲ್ದಪ | ಳಿನ್ನೇವುದೊ? ದೈವಗತಿಯ ಕಂಡ ವನಾವಂ? ‖೮೦‖

ಹರೆಯಂಮೀರುವುದೆನುತೀ | ತರುಣಿಯು ನಾವಿಜಯಕೇತುವಿನವು ಗನಪ್ಪೊ ‖ ವರಪುಷ್ಪಕೇತುವಿಗೆ ಕುಡ | ಲರಸಂ ನಿರ್ಣಯಿಸಿನಾಳೆಮದುವೆ ಯುಮಾಳ್ಪಂ ‖೮೧‖

ಎಂಬುದನರಿತಾಮೆಲ್ಲರ್ | ನೀಂಬಾರದೆಪೋದೆಯಾದೊಡಿರುಳೊಳೆ ಕಿರ್ಚಂ ‖ ನಂಬುವೆವೆನುತಿರೆ ಭಾಗ್ಯದೆ | ನೀಂ ಬಂದೈ ಮುಂದೆ ಮಾಳ್ಪುದಂ ನಿರ್ಣಯಿಸಾ ‖೮೨‖

ಎನೆಕೇಳ್ದರಸುಕುಮಾರಂ | ಮನದೊಳ್ಭೀತಿಯನೆ ತೊರೆದು ಸಖಿ ಯರೊಳಾಲೋ ‖ ಚನೆಗೆಯ್ದಲ್ಲಿಯೆ ಸನ್ನಿ | ತ್ರನನಿಲ್ಲಿಸಿ ಸತಿಯಗೂಡಿ ತಾಂ ಪೊರಮಟ್ಟಂ ‖೮೩‖

ತುರಗಂ ಮನೋಜವಂ ಬಂ | ದಿರೆ ವಾಸವದತ್ತೆಯೊಡನೆ ಯೇರುತ ಲಾತಂ ‖ ಪುರದಿಂದಂ ಪೊರಮಟ್ಟತಿ | ತುರಿಹದಿ ನಿರುಳಲ್ಲಿ ನಡೆದನೊರ್ಗಾವುದಮಂ ‖೮೪‖

ಅರೆಬೆಂದ ಪೆಣಗಳೀ ಮೇಣ್ | ನರಮಾಂಸವನುಂಬ ಕಂಕಸಂಕು ಲದಿಂದಂ ‖ ನೆರೆಕುಣಿವ ಡಾಕಿನಿಗಳಿಂ | ಪರಿರಂಜಿಪ ಮಸಣಮೊಂದನವರೀಕ್ಷಿಸಿದರ್ ‖೮೫‖

ಕಡುವೇಗದಿಂದೆ ಮುಂದಕೆ | ನಡೆಯುತ್ತಂ ವಿಂಧ್ಯಗಿರಿಯ ಸನಿಹದೊಳಾಕಾ ‖ ರಡವಿಯಸೊಬಗಂ ನೋಡುತೆ | ಮಡದಿಯೊಡಂನಿಂದನಲ್ಲಿ ಜನ ಪಾಲಸುತಂ ‖೮೬‖

ಅನಿತರೊಳಾದಂಪತಿಗಳ | ಘನನಿದ್ರೆಯನೊಯ್ದು ನಡೆದಳಾರಜನೀಕಾ ‖ ಮಿನಿಯರುಣೋದಯಮಾದ | ತ್ತಿನಬಿಂಬಂ ಮೂಡಿದತ್ತುಮೂಡಣ ಗಿರಿಯೊಳ್ ‖೮೭‖

ಚಕ್ಕವಕ್ಕಿಗಳ ಹೃದಯದ? (ಎಕ್ಕಟಿಯ ಚಕ್ಕವಕ್ಕಿಯ) | ಕಕ್ಕುಲಿತೆ ಯಡಂಗಿದತ್ತು ಬಿರಿದತ್ತಬ್ಜಂ ‖ ಕಕ್ಕಸದ ಕದಿರ್ಗಳಿಂ ಸವಿ | ದಿಕ್ಕಿದನಾ ಭಾಸ್ಕರಂ ಧರಿತ್ರೀತಳಮಂ ‖೮೮‖



ಇರುಳೊಳಗನಶನದಿಂ ಜಾ | ಗರದಿಂದಂ ಶಕ್ತಿಗುಂದಿ ಬಿಸಿಲಿಂ ಬಳಲ್ದಾ ‖ ನರಪಸುತಂ ಮಲಗಿದನಾ | ತರುಣಿಯುಂ ಮೊರಗಿರ್ದಳಲ್ಲಿ ನಿದ್ರಾ ಭರದಿಂ ‖೮೯‖

ಅಂಬರಮಧ್ಯವ ಭಾಸ್ಕರ | ಬಿಂಬಂಸಾರಲ್ಕೆ ನಿದ್ರೆ ತಿಳಿದಾತರುಣಂ ‖ ಬಿಂಬಾಧರೆಯಂ ಕಾಣದೆ | ಕಂಬನಿದುಂಬುತ್ತಲರಸಿದಂ ದಿಕ್ಕುಗಳೊಳ್ ‖೯೦‖

ಮರಗಳೊಳಂ ಬಳ್ಳಿಯೊಳಂ | ತರಗೆಲೆಯೊಳ ಮಗದಕೋಡೊಳಂ ಬಾವಿಯೊಳಂ ‖ ತರುಣಿಯನರಸುತೆ ಕಾಣದೆ | ಪರಿತಾಪಂಗೊಂಡು ನೆನೆವುತಂ ಬಿಸುಸುಯ್ದಂ ‖೯೧‖

ವಾಸವದತ್ತೆಯೆ! ನೀಂಪರಿ | ಹಾಸಮನುಳಿದೆನಗೆ ದರ್ಶನಂ ಗುಡು ಹಾಹಾ!! ‖ ಹಾಸಖ ಮಕರಂದನೆ! ನೋ | ಡೀಸಮಯದೆ ದೈವಗತಿಯ ಚಿತ್ರದ ಪರಿಯಂ ‖೯೨‖

ಅವಳನಗಲಿಸಿದೆನೊ? ನಾಂ | ಭೂವಿಬುದರನೆಲ್ಲಿ ನೋಯಿಸಿದೆನೋ ನೆರೆಸಂ ‖ ಭಾವಿಸದೆ ಗುರುವಮರೆದೆನೊ? | ಈವಿಧಿಪರಿಪಾಕಮೆನಗೆ ಕಂಡುದು ಹಾಹಾ! ‖೯೩‖

ಇಂತುರೆಪಂಬಲಿಸುತ್ತಂ | ಚಿಂತಾಬುಧಿಯಲ್ಲಿ ಮುಳುಗಿ ಮುಂ ತೋರದೆ ಭೂ ‖ ಕಾಂತಸುತನಸುವ ತೊರೆವೊಡೆ | ಸ್ವಾಂತದೆ ನಿರ್ಣಯಿಸಿ ತೆಂಕಣತ್ತಲ್ನಡೆದಂ ‖೯೪|

ಪುನ್ನಾಗ ನಾಗಕೇಸರ | ಸನ್ನುತಸಹಕಾರ ಕೋವಿದಾರಂಗಳನ ‖ ತ್ಯುನ್ನತ ತಾಲತಮಾಲದೆ | ಚೆನ್ನೆಸೆವಡವಿಯನೆದಾಟ ನಡೆತರುತಿರ್ದಂ ‖ ‖೯೫‖

ಪಲದೂರಂ ನಡೆದವನಿಪ | ತಿಲಕಂಗರಿವೆರೆದ ಗಿರಿಗಳಿಂದಂ ಧರಣೀ ‖ ತಲಕವತರಿಸಿದ ನಭವೆನೆ | ಜಲನಿಧಿಯಂ ಕಂಡು ಬಣ್ಣಿಸಿದನದರಿರವಂ ‖೯೬‖

ಅಲೆಯಿಂ ಪ್ರವಾಳ ಲತೆಯಿಂ | ಜಲಚರ ನಿಕರಂಗಳಿಂದೆ ಮಣಿಗಣದಿಂದಂ ‖ ಸುಳಿಯಿಂ ಮಡುವಿಂಬರುತಿಹ | ಪೊಳೆಗಳನಚ್ಚರಿಯತೋರ್ದುದಂಬುಧಿಚೆಲ್ವಿಂ ‖೯೭‖

Digitized by ROJA MUTHIAH RESEARCH LIBRARY

ಸುಜನನವೋಲ್ಸದ್ಗೋತ್ರಂ | ಭುಜಗಾಧಿಪನಂತೆ ಪ್ರಕಟವಿಷ ರಾಶಿ, ದಿಶಾ || ಗಜದಂತೈರಾವಣನಂ || ಬುಜನಾಭನ ಮಾಳ್ಕೆಯಿಂದೆ ಪದ್ಮಾವಾಸಂ ||೯೮||

ಅಪಕಾರಿಯಾದ ತನ್ನೊಳ | ಮುಪಕಾರಂ ತೋರ್ದುದಲ್ತೆ ! ದೈವಂತಾನೀ || ಸುಪವಿತ್ರಾಬ್ಧಿಯೊಳುರುಳ್ದೀ | ವಪುವಂ ತ್ಯಜಿಸುವುದೆ ಲೇಸೆನುತ್ತಂ ತಿಳಿದಂ ||೯೯||

ಪುರುಕುತ್ಸಂ ಕುತ್ಸಿತನಾ | ಗುರುಪತ್ನಿಯ ತಂದು ಶಶಧರಂಕ್ಷ ಯಿಯಾದಂ || ಗುರುಸುತೆಯಂ ಕೈವಿಡಿಯುತೆ | ಧರೆಗುರುಳ್ದಂ ನೃಪಯಯಾತಿ, ಸೋಲದರೊಳರೇ ? ||೧೦೦||

ವೃಷಪತ್ನಿಗೆಳಸುತಾಶೀ | ವಿಷನಾಗಿಯೆ ನಹುಷನಿಳಿದನಾ ಕಲಿಯಿಂದಂ || ನಿಷಧಪತಿನೊಂದ ಸಿಳೆಯೊಳ್ | ವಿಷಯ ಸುಖಕ್ಕಾಸೆಗೊಂಡು ಬರ್ದುಕಿದನಾವಂ ||೧೦೧||

ಜಗದೊಳಕಳಂಕನೆಸಿಪನೆ | ಬಗೆದೋರಂ ನಾನು ಮಂತೆಯೇ ತನುಗಳೆದಾ || ಸುಗುಣೆಯ ವಿಯೋಗದಳಲಂ | ಬಗೆಗಾಣಿಪೆನೆಂದು ಬಂದನತಿರಯದಿಂದಂ ||೧೦೨||

ಪುಳಿನತಳಕೆಯ್ದಿ ನಿಚ್ಚ್ಹದೆ | ಕೆಲಸಗಳಂ ತೀರ್ಚೆ, ತನುವನುಳಿದಪೆನೆನುತಂ || ಜಲಧಿಯೊಳಳಿಯುತಿರಲ್ಕಾ | ಗಳೆ ಕೇಳಿಸಿದತ್ತದೊಂದು ವಚನಂ ನಭದಿಂ ||೧೦೩||

ಮರಣಕೆಯತ್ನಿಸದಿರ್ ಭೂ | ವರ ! ಬೇಗನೆ ನಿನ್ನ ವಲ್ಲಭೆಯ ಕಂಡಪ್ಪುಯ್ || ತಿರುಗತ್ತಲೆಂದು ನುಡಿಯಲ್ | ಭರದಿಂ ನೋಡುತ್ತೆ ತಡಿಗೆ ಬಂದಂ ತರುಣಂ ||೧೦೪||

ತೊಳಲುತ್ತಲ್ಲಲ್ಲಿಯೆ ವರ | ಫಲಮೂಲಂಗಳನೆ ತಿಂದು ಪೊರೆಯುತ್ತೊಡಲಂ || ಪಲದಿನದನ್ನಂ ಕಾಂತೆಯ | ಸುಳಿವಂ ಕಾಣದೆಯೆ ತಿರುಗುತಿರಲಾಕಾಡೊಳ್ ||೧೦೫||

ಇಳೆಯೆಲ್ಲಂ ಬಿಸಿಲಿಂ ಬಸ | ವಳಿಯುತಿರಲ್ತಣ್ಪನಿತ್ತು ಪೊರೆದಪೆನೆನುತಂ || ಮಳೆಗಾಲಂ ಬರಲಭ್ರದೆ | ಜಲದಂಗಳ್ಮಿಚ್ಚಿ ಕರೆಯುತಿರ್ದುವು ಮಳೆಯಂ ||೧೦೬||

Digitized by ROJA MUTHIAH RESEARCH LIBRARY



ಮದನನವಿಲಾಸ ದಂಡವೊ ! | ಇದುಗಗನ ಶ್ರೀಯ ಕನಕಮೇಖಲೆಯೋ ! ರ || ನ್ನದಶಕ್ತಿಯೊ ! ಎಂಬಂದದೆ | ಮುದಮಂ ತೋರ್ದತ್ತು ಶಕ್ರಧನುವಾಕಾರೊಳ್ ||೧೦೭||

ಗುಡುಗಿಂ ಸಿಡಿಲಿಂ ಮಿಂಚಿಂ | ಧಡಬಡಿಸುತೆ ಸುರಿವ ಪನಿಯಿನಾಕರಕಗಳಿಂ || ಗಡಣಿಸಿ ವರ್ಷಿಸುತಂ ತಾಂ | ನಡೆದತ್ತಾ ಜಲದಕಾಲಮಲ್ಲಿಂ ಬಳಿಯಂ ||೧೦೮||

ಶರದಾರಂಭಂಬರೆ ಜಲ | ಧರಗಣಮತಿ ಶುಭ್ರಮಾಗಿ ತೊಳಗಿದುದಭ್ರಂ || ಸರಸಿಜಗಳ್ತಲೆದೋರ್ದುವು | ಪರಿವಪೊನಲ್ಸ್ವಚ್ಛಮಾಗಿ ತಿಳದತ್ತುದಕಂ ||೧೦೯||

ಜನಪನ ತನಯಂ ತೊಳಲ್ದಾ | ಘನಗಹನದೆ ಕಂಡನರೆಯಪುತ್ರಿಕೆಯೊಂದಂ || ಸನಿಹಕೆ ಬರುತಂ ಸೋಂಕಲ್ | ವನಿತೆಯರೂಪಿಂದೆ ನಿಂದಳಾತನ ಕಾಂತೆ || ||೧೧೦||

ಏನಿದು ! ವಾಸವದತ್ತೆಯೆ ! | ಕಾನನದೊಳ್ಮರಸಿಯೆತ್ತಲೆಯ್ದಿದೆಯೆಂದಾ || ಮಾನಿನಿಯಂ ತಳ್ಕೈಸುತೆ | ಮಾನಧನಂ ಬೆಸಗೊಳಲ್ಕೆ ವಿನಯದೆ ನುಡಿದಳ್ ||೧೧೧||

ಎನಗಾಗಿ ರಾಜ್ಯಮಂ ತೊರೆ | ದನಘನೆ ! ಬಹುದುಃಖದನುಭವವ ಸೈರಿಸಿದೈ || ಬನದೊಳ್ನೀಂ ನಿದ್ರಿಸಿರಲ್ | ತನಗೆಚ್ಚರ್ಮೊದಲೆತೋರ್ದುನವೆದೆಂಪಸಿವಿಂ ||೧೧೨||

ಅನಶನದಿಂ ಪಸಿದಿರ್ಪ್ಪಂ | ಘನಫಲಮೂಲಗಳ ತಂದು ಕೊಟ್ಟಪೆನೆಂದಾಂ || ವನದೊಳ್ನಲ್ವದ ನಡೆಯಲ್ | ಚಣದೊಳ್ಬಂದತ್ತು ಬಿಯುದಪಡೆ ಭರದಿಂದಂ ||೧೧೩||

ತಂದೆಯ ಸೇನೆಯೊ ! ವಲ್ಲಭ | ನಂದವಪರಿಕಿಪ್ಪೊಡೆ ಬಂದಮಾವನ ಪಡೆಯೋ ? || ಸಂದೆಗಮುಪ್ಪುದೆನುತ್ತಂ | ನಿಂದಿರದೋಡುತ್ತೆ ಬಂದನಾವ್ಯಾಧೇಶಂ ||೧೧೪||

ಅವನಂ ಪಿಂಬಾಲಿಸುತಂ | ಜವದಿಂ ಮತ್ತೊರ್ವನಲ್ಲಿಗೆಯ್ತಂದಂತಾ || ಮವರಿರ್ವರು ಮುರುಲೋಭದೆ | ಕವಿದೆಚ್ಚಾಡುತ್ತೆ ಕಂಡರಂತಕಪುರವಂ ||೧೧೫||

ಅಧಟಂ ಪೊಯ್ದಾಡಿದರಾ | ಯುಧತತಿಯಿಂದವರ ಭಟರುಮಳಿದ ರ್ಬಳಿಕಂ ‖ ವ್ಯಥೆಯಿಂ ಮುನಿಪತಿ ಬಂದೀ | ವಧೆಗಳನೀಕ್ಷಿಸುತೆ ಮುಳಿದು ಶಪಿಸಿದನೆನ್ನಂ ‖೧೧೬‖

ನಿನ್ನನಿಮಿತ್ತದಿ ನಳಿದುದು | ತನ್ನಾಶ್ರಮಮಬಲೆ! ನೀನೆಶಿಲೆಯಾಗೆನುತಂ ‖ ಎನ್ನಂ ಶಪಿಸಲ್ಮರುಗುತೆ | ತನ್ಮುನಿಯಡಿಗೆರಗಿ ವಿನಯದಿಂ ಬೇಡಿದೆನಾಂ ‖೧೧೭‖

ಇನಿಯನ ಹಸ್ತಂ ಸೋಂಕಲ್ | ಘನಶಾಪಂ ಪರಿವುದೆಂದು ಕರುಣಿಸಿ ಸರಿದಂ ‖ ಮುನಿಪತಿಯದರಿಂದರೆಯಾ | ದೆನೆನಲ್ಕೇಳುತ್ತೆನೊಂದು ಬೆರಗಾಗಿರ್ದಂ ‖೧೧೮‖

ಮಕರಂದನು ಮೈತರಲಾ! ಶುಕವಾಣಿಯ ಕೂಡಿಕೊಂಡು ಪಾಟಲಪುರಿಗಾ ‖ ಸುಕುಮಾರಂ ನಡೆತಂದತಿ | ಸುಖದಿಂ ಪಲಕಾಲಮಿಳೆಯನಾಳುತಲಿರ್ದಂ ‖೧೧೯‖

ವಾಸವದತ್ತೆಯ ಕೂಡಿ ವಿ | ಳಾಸದೊಳಾ ಸ್ವರ್ಗಭೋಗವೆಲ್ಲವ ಪಡೆದಾ ‖ ಭಾಸುರಕೀರ್ತಿಯ ಗಳಿಸಿ ವಿ | ಶೇಷದೆ ಕಂದರ್ಪಕೇತು ಸುಖದಿಂದಿರ್ದಂ ‖೧೨೦‖

ಎಲ್ಲಿಯ ಸುಬಂಧು ವಾಚೋ | ವಲ್ಲರಿ! ಎಲ್ಲಿಯಕವಿತ್ವ? ಮಲ್ಪಜ್ಞಂನಾಂ ‖ ಬಲ್ಲಂದದೆ ಕನ್ನಡಿಸಿದ | ಸೊಲ್ಲೊಳ್ದೋಸಂಗಳರ್ದೊಡಂಗಣಿಸದಿರಿಂ ‖೧೨೧‖

162

ಸಂಪೂರ್ಣ.

Digitized by ROJA MUTHIAH RESEARCH LIBRARY

ದಿನಾಂಕ ಸೂಚಿ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮

ಸರಸ್ವತಿ ಭಂಡಾರ

ವಿ. ಸೂ: ೧೫ ದಿನಗಳಿಗಿಂತ ಹೆಚ್ಚುಕಾಲ ಯಾರೂ ಪುಸ್ತಕವನ್ನಿಟ್ಟುಕೊಳ್ಳಲಾಗದು.

| ಹಿಂದಿರುಗಿಸುವ ದಿನ | ಹಿಂದಿರುಗಿಸುವ ದಿನ |
|---|---|

ಪುಸ್ತಕಸೂಚಿ

ವ. ಸಂ: O, 33, 188 AYY V

ಕ್ರ. ಸಂ: 11528. N

ಅಯ್ಯಂಗಾರ್ ಕೆ ರಾವು

ವ. ಸಂ: O, 33, 188 AYY V

ಕ್ರ. ಸಂ: 11528. N

ಕ. ಸಾ. ಪ.
ಗ್ರಂಥ ಭಂಡಾರ

Digitized by ROJA MUTHIAH RESEARCH LIBRARY

Digitized by ROJA MUTHIAH RESEARCH LIBRARY